**ಪಿ. ಡಬ್ಲ್ಯೂಃ 1**

**( ಇಂದು ದಿಃ 19/06/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್ ಟಿ ಎನ್ ವಕೀಲರಿಂದ,**

ನಾನು ಪಿರ್ಯಾದಿ ಸಂಸ್ಥೆಯಲ್ಲಿ ಕಳೆದ 04 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದೇನೆ. ನಮ್ಮ ಪಿರ್ಯಾದಿ ಸಂಸ್ಥೆಯು ಕಾನೂನಿನಡಿಯಲ್ಲಿ ನೊಂದಣಿ ಆದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಆದರೆ ಹಾಜರುಪಡಿಸಬಹುದು. ನನಗೆ ಸದರಿ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ಅಧಿಕಾರ ಪತ್ರ ನೀಡಿದ್ದಾರೆ. ಸದರಿ ಪತ್ರವನ್ನು ನೀಡಲು ಠರಾವು ಮಾಡಿದ್ದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಆದರೆ ಹಾಜರುಪಡಿಸಬಹುದು. ಆರೋಪಿ ಸದರಿ ಸಾಲಕ್ಕೆ ಜಾಮೀನುದಾರಾಗಿದ್ದಾರೆ . ಸಾಲಗಾರನಿಗೆ ಸಾಲ ನೀಡುವಾಗ ನಾನು ಸದರಿ ಸಂಸ್ಥೆಯಲ್ಲಿ ಮ್ಯಾನೇಜರ್ ಆಗಿದ್ದು ಇರುವುದಿಲ್ಲ. ಸದರಿ ಪ್ರಕರಣದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಹಿಂದಿನ ಮ್ಯಾನೇಜರ್ ಗೆ ಕೇಳಿ ತಿಳಿದುಕೊಂಡಿರುತ್ತೇನೆಂದು ಉತ್ತರಿಸಿರತ್ತಾರೆ. ಸಾಲಗಾರನಿಗೆ ರೂ. 50,000 ಸಾಲ ನೀಡಿದ್ದು ಅದರಲ್ಲಿ ರೂ. 10,000 ಷೇರು ಮತ್ತು ಎಪ್ ಡಿ ಯನ್ನು ಇಟ್ಟುಕೊಂಡಿರುತ್ತೇವೆ. ಸಾಲಗಾರನಿಗೆ ರೂ. 40,000 ಸಾಲ ನೀಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯು ಈ ಹಿಂದೆ ಮಾಡಿದ ಸಾಲವನ್ನು ಚುಕ್ತಾ ಮಾಡಿದ್ದಾರೆ ಎಂದರೆ ಸಾಕ್ಷಿಯು ಇರಬಹುದು ಆದರೆ ನನಗೆ ಅದರ ಬಗ್ಗೆ ಮಾಹಿತಿ ಇಲ್ಲವೆಂದು ಉತ್ತರಿಸಿರುತ್ತಾರೆ. ಸಾಲ ಕಟ್ಟು ಬಾಕಿ ಆದಾಗ ಸಾಲಗಾರನ ವಿರುದ್ಧ ಆರ್ ಬಿ ಟ್ರೇಶನ್ ಪ್ರಕರಣ ದಾಖಲಿಸಿರುತ್ತಾರೆ. ಚೆಕ್ಕನ್ನು ಆರೋಪಿ ನನ್ನ ಸಮಕ್ಷಮ ನೀಡಿರುತ್ತಾರೆ. ಆರೋಪಿಯು ದಿಃ 29.06.2021 ರಂದು ಚೆಕ್ಕನ್ನು ನೀಡಿದ್ದಾರೆಂದು ತೋರಿಸಲು ರಜಿಸ್ಟರಿನಲ್ಲಿ ನಮೂದು ಮಾಡುವುದಿಲ್ಲ. ಚೆಕ್ಕು ನೀಡುವ ಕಾಲಕ್ಕೆ ಸಿಂಡಿಕೇಟ ಬ್ಯಾಂಕ್ ಕೆನರಾ ಬ್ಯಾಂಕ್ ಆಗಿ ವಿಲೀನಗೊಂಡಿದೆ ಎಂದರೆ ಸರಿ. ಚೆಕ್ಕನ್ನು ನೀಡುವಾಗ ನಾವು ಸಿಂಡಿಕೇಟ್ ಬ್ಯಾಂಕಿನ ಚೆಕ್ಕನ್ನು ತಿರಸ್ಕರಿಸಿದ್ದು ಇಲ್ಲ. ದಿಃ 13.09.2021 ರಂದು ನಾವು ಬ್ಯಾಂಕಿಗೆ ಚೆಕ್ಕನ್ನು ನಗಧೀಕರಣ್ಕೆ ಹಾಕಿರುತ್ತೇವೆ ಎಂದರೆ ಮೊದಲೇ ನಾವು ಚೆಕ್ಕನ್ನು ಬ್ಯಾಂಕಿಗೆ ಹಾಕಿರುತ್ತೇವೆ ಆದರೆ ಮೆಮೋವನ್ನು ಅವರು ಆ ದಿನ ನೀಡಿರುತ್ತಾರೆಂದು ಸಾಕ್ಷಿ ಉತ್ತರಿಸಿರುತ್ತಾರೆ. ಸಿಂಡಿಕೇಟ್ ಬ್ಯಾಂಕ್ ರವರು ದಿಃ 30.06.2021 ರಂದು ಎಲ್ಲಾ ಚೆಕ್ಕನ್ನು ನಗಧೀಕರಣ ಮಾಡಬೇಕೆಂದು ಹೇಳಿರುತ್ತಾರೆ ಎಂದರೆ ಸರಿ. ಆರೋಪಿತನು ಚೆಕ್ಕನ್ನು ಸದರಿ ಸಾಲದ ಮರುಪಾವತಿಗಾಗಿ ನೀಡಿದ್ದು ಇಲ್ಲ ಎಂದರೆ ಸರಿಯಲ್ಲ. ಆರೋಪಿಯು ಹಿಂದಿನ ಸಾಲದ ಭದ್ರತೆಗಾಗಿ ನೀಡಿದ ಚೆಕ್ಕನ್ನು ದುರುಪಯೋಗಪಡಿಸಿ ಆತನ ವಿರುದ್ಧ ಸುಳ್ಳು ಪ್ರಕರಣ

ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಹಿಂದಿನ ಸಾಲ ಚುಕ್ತಾ ಮಾಡಿದ್ದರೂ ಸಹ ಭದ್ರತೆಗಾಗಿ ನೀಡಿದ ಚೆಕ್ಕನ್ನು ವಾಪಸ್ಸು ನೀಡಿಲ್ಲ ಎಂದರೆ ಸರಿಯಲ್ಲ. ಪದೇ ಪದೇ ಚೆಕ್ಕನ್ನು ಕೇಳುತ್ತಿದ್ದ ಕಾರಣ ಮಾನ್ಯತೆ ಇಲ್ಲದ ಚೆಕ್ಕನ್ನು ಬ್ಯಾಂಕಿಗೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಚೆಕ್ಕಿನ ಮೇಲೆ ಇರುವ ಬರವಣಿಗೆ ನಮ್ಮ ಸಿಬ್ಬಂದಿಯದು ಆಗಿದೆ ಎಂದರೆ ಸರಿಯಲ್ಲ. ಹಾಜರುಪಡಿಸಿದ ಎಲ್ಲಾ ಕಾಗದಪತ್ರಗಳು ಸದರಿ ಪ್ರಕರಣಕ್ಕಾಗಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಪ್ರಕರಣ ನಡೆಸಲು ನನಗೆ ಯಾವುದೇ ಅಧಿಕಾರ ಪತ್ರವನ್ನು ನೀಡಿದ್ದೇ ಇಲ್ಲ ಎಂದರೆ ಸರಿಯಲ್ಲ. ಹಾಜರುಪಡಿಸಿದ ಚೆಕ್ಕಿಗೆ ಮಾನ್ಯತೆ ಇರದ ಕಾರಣ ಆರೋಪಿ ವಿರುದ್ದ ದಾಖಲಿಸಿದ ಪ್ರಕರಣ ನಡೆಯತಕ್ಕದ್ದಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**